1906847

ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **168**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **169**) ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ಉತ್ತರಿಸಬೇಕು. ಅಭ್ಯರ್ಥಿಗಳು ತಾವು ಆಯ್ಕೆ ಮಾಡಿ, ಉತ್ತರಿಸುವ ವಿಷಯದ ಹೆಸರು ಮತ್ತು ವಿಷಯ ಸಂಕೇತವನ್ನು ಕಡ್ಡಾಯವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮೇಲೆ ನಿಗದಿತ ಸ್ಥಳದಲ್ಲಿ ನಮೂದಿಸತಕ್ಕದ್ದು.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

ಪ್ರಥಮ ದರ್ಜೆ ಸಹಾಯಕರು.

**2017**

**ಪ್ರಶ್ನೆ ಪುಸ್ತಿಕೆ ಶ್ರೇಣಿ**

# C

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 168** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| **ನೋಂದಣಿ ಸಂಖ್ಯೆ** |
|---|
| |

4. ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು**. ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ**. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

www.Shikarat.com

***ಸೂಚನೆಗಳು :*** *ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ 1 - 9) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರ್ತಿಸಿ.*

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

1. "ಕಡಸು" ಎಂದರೆ ________

(1) ಗಟ್ಟಿ

(2) ಹಸು

(3) ನಾಶಪಡಿಸು

(4) ಕತ್ತರಿಸು

2. "ಬಾನ್" ಎಂದರೆ ________

(1) ಆಕಾಶ

(2) ಸೂರ್ಯ

(3) ಬಾನಿ

(4) ಅನ್ನ

3. "ಕುರುಳು" ಎಂದರೆ ________

(1) ಕೊರಳು

(2) ಕರುಳು

(3) ಕೂದಲು

(4) ಒರಳು

4. "ಕರಿಮುಖ" ಎಂದರೆ ________

(1) ಕಪ್ಪು ಮುಖದವನು

(2) ಕೋತಿ

(3) ಆನೆ

(4) ಗಣಪತಿ

5. "ಬೆನ್ನೀರು" ಎಂದರೆ ________

(1) ಬೆವರು

(2) ಬೆನ್ನಿಗೆ ಹಾಕುವ ನೀರು

(3) ಬಿಸಿನೀರು

(4) ಸಮುದ್ರ

6. "ಭ್ರಮರ" ಎಂದರೆ ________

(1) ಭ್ರಮೆ

(2) ಒಂದು ಜಾತಿಯ ಮರ

(3) ಹೊಗೆ

(4) ದುಂಬಿ



www.shikarat.com

7. "ಕೇತನ" ಎಂದರೆ ________

(1) ಚೇತನ

(2) ಕೇತು

(3) ಬಾವುಟ

(4) ಹೊಲಗದ್ದೆ

8. "ಒಲುಮೆ" ಎಂದರೆ ________

(1) ಒಲುವುದು

(2) ಕುಲುಮೆ

(3) ಪ್ರೀತಿ

(4) ಒತ್ತಾಯ

9. "ಕೌಸ್ತುಭಧರ" ಎಂದರೆ ________

(1) ಶಿವ

(2) ವಿಷ್ಣು

(3) ಬ್ರಹ್ಮ

(4) ಭೀಮ

*ಸೂಚನೆಗಳು : ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 10 - 17) ವಿರುದ್ಧಾರ್ಥಕ ಪದಗಳ ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಿಂದ ಗುರ್ತಿಸಿ.*

ಉದಾಹರಣೆ : ತೆಂಕಣ

(1) ಮೂಡಣ

(2) ಬಡಗಣ

(3) ಪಡುವಣ

(4) ತೆಗಣ

ಇಲ್ಲಿ "ತೆಂಕಣ" ಪದಕ್ಕೆ ವಿರುದ್ಧಾರ್ಥಕ ರೂಪ "ಬಡಗಣ" ಎಂಬುದು (2) ನ್ನು ಗುರುತಿಸಬಹುದು.

10. ಆತಂಕ

(1) ಅನಾತಂಕ

(2) ಸಮಾಧಾನ

(3) ನಿರಾಂತಕ

(4) ಅತ್ಯಾತಂಕ



www.shikarat.com

11. ಹಿಗ್ಗು

(1) ದುಃಖ

(2) ವಿಷಾದ

(3) ಕುಗ್ಗು

(4) ಉಬ್ಬು

12. ಶ್ವೇತ

(1) ಕೃಷ್ಣ

(2) ಕರಿಯ

(3) ಕಾಳ

(4) ಧವಳ

13. ನಾಕ

(1) ನರಕ

(2) ಸ್ವರ್ಗ

(3) ನಾಯಕ

(4) ಮೂಕ

14. ಆದಿ

(1) ಆರಂಭ

(2) ಹಾದಿ

(3) ಅಂತ್ಯ

(4) ಅನಂತ

15. ನಿರ್ಗಮನ

(1) ಸಂಗಮನ

(2) ದುರ್ಗಮನ

(3) ಸದ್ಗಮನ

(4) ಆಗಮನ

16. ಸೃಷ್ಟಿ

(1) ವ್ಯಷ್ಟಿ

(2) ನಾಶ

(3) ಲಯ

(4) ಪ್ರಳಯ

17. ಪ್ರೀತಿ

(1) ಜಗಳ

(2) ದ್ವೇಷ

(3) ತಿರಸ್ಕಾರ

(4) ಹೀನಾಯ

www.shikarat.com

***ಸೂಚನೆಗಳು :*** *ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು (ಪ್ರಶ್ನೆ ಸಂಖ್ಯೆ **18 - 27**) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.*

ಉದಾಹರಣೆ : "ಬೆಣ್ಣೆ ಹಚ್ಚು"

(1) ರೊಟ್ಟಿಗೆ ಬೆಣ್ಣೆ ಹಚ್ಚು

(2) ಮೈಯುಜ್ಜುವುದು

(3) ಹೊಗಳುವುದು

(4) ಸೇವೆ ಮಾಡುವುದು

ಇಲ್ಲಿ 3 ಸರಿಯಾದ ಅರ್ಥ ಆದುದರಿಂದ (3) ನ್ನು ಗುರುತಿಸಬೇಕು.

18. "ಕೈಕೊಡು"

(1) ಹಸ್ತಲಾಘವ ಮಾಡು

(2) ಮೋಸ ಮಾಡು

(3) ಸಹಾಯ ಮಾಡು

(4) ದಾನ ನೀಡುವ ಕೈ

19. "ಮುಖಕ್ಕೆ ಮಂಗಳಾರತಿ ಎತ್ತು"

(1) ಗೌರವ ನೀಡು

(2) ಆರತಿ ಮಾಡಿ ಸಂತೋಷಿಸು

(3) ಅವಮಾನ ಮಾಡು

(4) ದಕ್ಷಿಣೆ ಕಾಸಿಗೆ ಆಸೆಪಡು

20. "ಆಕಾಶಕ್ಕೆ ಏಣಿ ಹಾಕು"

(1) ದೊಡ್ಡ ಏಣಿ ಹಾಕು

(2) ಕೈಗೂಡದದ್ದಕ್ಕೆ ಪ್ರಯತ್ನಿಸು

(3) ಕಾಮನಬಿಲ್ಲು

(4) ಮೋಡಗಳ ರಾಶಿ

21. "ರಾಮಬಾಣ"

(1) ರಾಮ ಬಿಟ್ಟಿದ್ದ ಬಾಣ

(2) ಔಷಧಿಯೊಂದರ ಹೆಸರು

(3) ಹನುಮಂತ

(4) ಸರಿಯಾದ ಉಪಾಯ

22. "ಎರಡು ನಾಲಿಗೆ"

(1) ಒಂದು ಸಸ್ಯ

(2) ಹಾವಿನ ನಾಲಿಗೆ

(3) ಸುಳ್ಳಾಡುವುದು

(4) ಹೊಟ್ಟೆಬಾಕತನ

www.shikarat.com

23. "ಮೂಗು ತೂರಿಸು"

(1) ಮೂಗಿಗೆ ಮೂಗುತಿ ತೂರಿಸುವುದು

(2) ನೆಗಡಿಯಾಗುವುದು

(3) ಮೂಗನ್ನು ಕೆರೆಯುವುದು

(4) ಅನಗತ್ಯವಾಗಿ ಮಧ್ಯೆ ಪ್ರವೇಶಿಸುವುದು

24. "ಬಾಲ ಬಿಚ್ಚು"

(1) ಕಟ್ಟಿದ್ದ ಕರುವನ್ನು ಬಿಚ್ಚುವುದು

(2) ತೊಂದರೆ ಉಂಟು ಮಾಡುವುದು

(3) ಜಡೆಯನ್ನು ಬಿಚ್ಚುವುದು

(4) ಬಾಲವನ್ನು ಕತ್ತರಿಸುವುದು

25. "ಟೋಪಿಹಾಕು"

(1) ಕುಲಾವಿಯನ್ನು ಕಟ್ಟುವುದು

(2) ಕಳ್ಳತನ ಮಾಡುವುದು

(3) ರಕ್ಷಣೆ ಒದಗಿಸುವುದು

(4) ಮೋಸ ಮಾಡುವುದು

26. "ಮೊಸಳೆ ಕಣ್ಣೀರು"

(1) ಹೆಚ್ಚು ಪ್ರಮಾಣದ ಕಣ್ಣೀರು

(2) ಕಡಿಮೆ ಪ್ರಮಾಣದ ಕಣ್ಣೀರು

(3) ಈರುಳ್ಳಿ ಹೆಚ್ಚುವಾಗ ಸುರಿಯುವ ಕಣ್ಣೀರು

(4) ಕಪಟ ದುಃಖ

27. "ಕಾಲುಕೀಳು"

(1) ಕಾಲಿನ ಶಸ್ತ್ರಚಿಕಿತ್ಸೆ

(2) ಚಪ್ಪಲಿ

(3) ಕಾಲುಮುಟ್ಟಿ ನಮಸ್ಕರಿಸು

(4) ಓಡಿಹೋಗು

*__ಸೂಚನೆಗಳು:__ ಈ ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆ ಸಂಖ್ಯೆ **28 – 33**) ಒಂದು ಪದ ಉಳಿದವುಗಳ ಗುಂಪಿಗೆ ಸೇರುವುದಿಲ್ಲ. ಅಂತಹ ಪದ ಗುರುತಿಸಿ.*

ಉದಾಹರಣೆ :

(1) ಹುಡುಗಿ

(2) ನವಿಲು

(3) ಗಿಳಿ

(4) ಕಿತ್ತಳೆ

ಇಲ್ಲಿ "ಕಿತ್ತಳೆ" ಇತರ ಪದಗಳ ಜಾತಿಗೆ ಸೇರುವುದಿಲ್ಲ ಆದುದರಿಂದ (4) ನ್ನು ಗುರುತಿಸಬೇಕು.

28. (1) ಹಾಲು

(2) ಮೊಸರು

(3) ಬೆಣ್ಣೆ

(4) ತುಪ್ಪ



www.shikarat.com

29. (1) ವಸಂತ

(2) ಹೇಮಂತ

(3) ಕಾರ್ತೀಕ

(4) ಶರತ್

30. (1) ಸವರ್ಣದೀರ್ಘ ಸಂಧಿ

(2) ಆಗಮ ಸಂಧಿ

(3) ಗುಣ ಸಂಧಿ

(4) ವೃದ್ಧಿಸಂಧಿ

31. (1) ಎತ್ತು

(2) ಆಡು

(3) ಕಾಡು

(4) ನೋಡು

32. (1) ಕೆರೆ

(2) ತೊರೆ

(3) ಹೊಳೆ

(4) ನದಿ

33. (1) ಡಿ.ವಿ. ಗುಂಡಪ್ಪ

(2) ವಿ. ಸೀತಾರಾಮಯ್ಯ

(3) ತ್ರಿವೇಣಿ

(4) ವೈದೇಹಿ

***ಸೂಚನೆಗಳು:*** *ಕೆಳಗಿನ ವಾಕ್ಯಗಳಲ್ಲಿ ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯ ರೂಪಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ. ತಪ್ಪಿಲ್ಲದಿದ್ದರೆ "ತಪ್ಪಿಲ್ಲ" ಎಂಬ (4) ನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ **34 – 40**).*

ಉದಾಹರಣೆ : ಲೋಕಾಯುಕ್ತ ಲಂಚ **ಹಗುರಣಕ್ಕೆ** ಸಂಬಂಧಿಸಿ ಎಂಟು ಜನರ ಬಂಧನ

(1) ಹಾಗರಣ

(2) ಹಗರಣ

(3) ಹಗರನ

(4) ಹಗರಾಣ

ಇಲ್ಲಿ ಗೆರೆ ಎಳೆದ "ಹಗುರಣ" ತಪ್ಪಾಗಿದ್ದು ಅದರ ಸರಿಯಾದ ರೂಪವು ಹಗರಣ ಎಂದಾಗಿದೆ ಅದರಿಂದ (2) ನ್ನು ಗುರುತಿಸಬೇಕು.

34. ವಿದ್ಯುಚ್ಛಕ್ತಿ ದೇಶದ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ.

(1) ವಿದ್ಯುಚ್ಚಕ್ತಿ

(2) ವಿಧ್ಯುತ್‌ಚಕ್ತಿ

(3) ವಿಧ್ಯುಛಕ್ತಿ

(4) ತಪ್ಪಿಲ್ಲ



www.shikarat.com

35. ಈ ಕೆಳಗಿನ ಪದ್ಯವನ್ನು <u>ವಿಸ್ಲೇಷಣೆ</u> ಮಾಡಿರಿ.

(1) ವಿಶ್ಲೇಶಣೆ

(2) ವಿಶ್ಲೇಷಣೆ

(3) ವಿಷ್ಲೇಶಣೆ

(4) ತಪ್ಪಿಲ್ಲ

36. ಕತ್ತೆಗೂ, ಕುದುರೆಗೂ ನಡುವಿನ <u>ವ್ಯತ್ಯಾಸ</u> ನಿಮಗೆ ಗೊತ್ತೆ?

(1) ವೆತ್ಯಾಸ

(2) ವೆತ್ಯಾಸ

(3) ವ್ಯಥ್ಯಾಸ

(4) ತಪ್ಪಿಲ್ಲ

37. ಇಲ್ಲಿ <u>ಪ್ರತಿಭಟಣೆ</u> ಮಾಡುವುದು ಒಳ್ಳೆಯದಲ್ಲ.

(1) ಪ್ರತಿಬಟನೆ

(2) ಪ್ರತಿಭಟನೆ

(3) ಪ್ರತಿಭಠನೆ

(4) ತಪ್ಪಿಲ್ಲ

38. ಸಂಪತ್ತಲ್ಲ, ಇಂದು ಆರೋಗ್ಯವೆ <u>ಮಹದೈಶ್ವರ್ಯ</u>

(1) ಮಹದೇಶ್ವರ್ಯ

(2) ಮಹಾದೈಶ್ವರ್ಯ

(3) ಮಹದೈಷ್ವರ್ಯ

(4) ತಪ್ಪಿಲ್ಲ

39. ಅರ್ಜುನನಿಗೆ ಸಾರಥಿಯಾಗಿ ಶ್ರೀಕೃಷ್ಣ <u>ಪಾರ್ಥಸಾರಥಿ</u> ಎಂಬ ಹೆಸರು ಪಡೆದನು.

(1) ಪಾರ್ತಸಾರಥಿ

(2) ಫಾರ್ಥಸಾರಥಿ

(3) ಪಾರ್ಥಸಾರತಿ

(4) ತಪ್ಪಿಲ್ಲ

40. ಆಕಾಶದಲ್ಲಿ ಕಾಮನಬಿಲ್ಲನ್ನು ಕಂಡು ಮಕ್ಕಳು <u>ಹರ್ಶ</u>ಪಟ್ಟರು.

(1) ಅರ್ಷ

(2) ಹರ್ಷ

(3) ಅರ್ಶ

(4) ತಪ್ಪಿಲ್ಲ

www.shikarat.com

***ಸೂಚನೆಗಳು:*** *ಖಾಲಿ ಬಿಟ್ಟಿರುವ ಜಾಗಕ್ಕೆ ಸರಿಯಾದ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ **41 – 65**)*

ಉದಾಹರಣೆ : ನಡೆಯುತ್ತಿದೆ ಎಂಬುದು __________ ದ ಪದ.

(1) ಭೂತಕಾಲ

(2) ವರ್ತಮಾನ ಕಾಲ

(3) ಭವಿಷ್ಯತ್ ಕಾಲ

(4) ಹಿಂದಿನ ಕಾಲ

ಇಲ್ಲಿ "ವರ್ತಮಾನಕಾಲ" ಎಂಬುದು ಸರಿಯಾದ ಉತ್ತರ ಆದುದರಿಂದ (2) ನ್ನು ಗುರುತಿಸಬೇಕು.

**41.** 'ಕಣ್ಣುಗಳು' ಎನ್ನುವುದು ______ ವಚನ.

(1) ಏಕ

(2) ದ್ವಿ

(3) ಬಹು

(4) ಸಂಖ್ಯಾವಚನ

**42.** 'ಮಾಡಿದ' ಎಂಬುದು __________ ದ ಉದಾಹರಣೆ.

(1) ಭೂತಕೃದಂತ

(2) ಭಾವಕೃದಂತ

(3) ಕೃದಂತಾವ್ಯಯ

(4) ತದ್ಧಿತಾಂತ

**43.** 'ಬಿಳುಪು' ಎಂಬುದು __________ ಪದ.

(1) ತದ್ಧಿತಾಂತ

(2) ತದ್ಧಿತಾಂತ ಅವ್ಯಯ

(3) ಭಾವಕೃದಂತ

(4) ತದ್ಧಿತಾಂತ ಭಾವನಾಮ

**44.** 'ಒಗ್ಗಟ್ಟು' ಎಂಬುದು __________ ಸಮಾಸ.

(1) ಅಂಶಿ

(2) ಬಹುವ್ರೀಹಿ

(3) ದ್ವಿಗು

(4) ಕರ್ಮಧಾರಯ

**45.** 'ಕಮಲನಯನ' ಎಂಬುದು __________ ಸಮಾಸ.

(1) ತತ್ಪುರುಷ

(2) ದ್ವಂದ್ವ

(3) ದ್ವಿಗು

(4) ಬಹುವ್ರೀಹಿ

www.shikarat.com

46. 'ಮುಂದಲೆ' ಎಂಬುದು ______ ಸಮಾಸ.

(1) ಅಂಶಿ

(2) ಕರ್ಮಧಾರಯ

(3) ಬಹುವ್ರೀಹಿ

(4) ತತ್ಪುರುಷ

47. 'ಕಣ್ದೆರೆ' ಎಂಬುದು ______ ಸಮಾಸ.

(1) ದ್ವಿಗು

(2) ದ್ವಂದ್ವ

(3) ಕ್ರಿಯಾ

(4) ಕ್ರಿಯಾ

48. 'ಮತ್ತೆ ಮತ್ತೆ' ಎಂಬ ಪದ ______ ಆಗಿದೆ.

(1) ಜೋಡುನುಡಿ

(2) ಅನುಕರಣಾವ್ಯಯ

(3) ದ್ವಿರುಕ್ತಿ

(4) ತಪ್ಪು ಬಳಕೆ

49. "ಅಯ್ಯೋ, ಮಗು ಬಿದ್ದು ಬಿಟ್ಟಿತಲ್ಲ" ಇಲ್ಲಿ 'ಅಯ್ಯೋ' ಎಂಬುದು ______

(1) ಅನುಕರಣಾವ್ಯಯ

(2) ಸಂಬಂಧ ಸೂಚಕಾವ್ಯಯ

(3) ಸಾಮಾನ್ಯಾವ್ಯಯ

(4) ಭಾವಸೂಚಕಾವ್ಯಯ

50. "ಡಬ್ಬದಲ್ಲಿನ ಸಕ್ಕರೆ ಸಿಹಿಯಾಗಿದೆ" ಎಂಬುದು ______ ವಾಕ್ಯವಾಗಿದೆ.

(1) ವೈಷಯಿಕ

(2) ಕ್ರಿಯಾತ್ಮಕ

(3) ಪ್ರಸ್ತಾವನಾ

(4) ನಿಷೇಧಾರ್ಥಕ

51. 'ಕೆಲವು' ಎಂಬ ಪದ ______ ವಾಚಕ.

(1) ಗುಣ

(2) ಸಂಖ್ಯಾ

(3) ಸಂಖ್ಯೇಯ

(4) ಪರಿಮಾಣ

www.shikarat.com

52. ನಮ್ಮ ವರ್ಣಮಾಲೆಯಲ್ಲಿ 'ಅಂ' ಎಂಬುದು __________ ಆಗಿದೆ.

(1) ಅನುನಾಸಿಕ

(2) ಅನುಸ್ವಾರ

(3) ಸಂಧ್ಯಕ್ಷರ

(4) ಅಲ್ಪ ವಿಸರ್ಗ

53. "ನಿಮಗೆ ಕಾಫಿಗೆ ಇನ್ನಷ್ಟು ಸಕ್ಕರೆ ಬೇಕು, ಅಲ್ಲವೆ ?" ಇದು __________ ಪ್ರಶ್ನೆ.

(1) ವೈಚಾರಿಕ

(2) ತಥ್ಯವಿಷಯಕ

(3) ವೈಕಲ್ಪಿತ

(4) ಅನುಗತ

54. ಮಣ್ಣಾದರು ಎಂಬ ಪದ __________ ಕಾಲದಲ್ಲಿದೆ.

(1) ಭೂತ

(2) ಭವಿಷ್ಯತ್

(3) ವರ್ತಮಾನ

(4) ಅಪರಿಚಿತ

55. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ __________

(1) 8

(2) 10

(3) 12

(4) 14

56. ತಮಿಳನ್ನು ಹೊರತು ಪಡಿಸಿದರೆ ಪ್ರಾಚೀನತಮವಾದ ದ್ರಾವಿಡ ಭಾಷೆ __________

(1) ತೆಲುಗು

(2) ಮಲೆಯಾಳಂ

(3) ತುಳು

(4) ಕನ್ನಡ

57. ವಿಜಾತೀಯ ಸಂಯುಕ್ತಾಕ್ಷರ ಇರುವ ಪದ __________

(1) ರೊಟ್ಟಿ

(2) ಅನ್ನ

(3) ರಾಗಿಮುದ್ದೆ

(4) ಪಲ್ಯ

www.shikarat.com

58. 'ಬೆಟ್ಟ' ಎಂಬುದು ________

(1) ನಾಮಪದ

(2) ಕ್ರಿಯಾಪದ

(3) ವಿಶೇಷಣ

(4) ಧಾತು

59. 'ಹಾಲಿನಲ್ಲಿ ಸಕ್ಕರೆ ಇಲ್ಲ' ಎನ್ನುವುದು ________ ವಾಕ್ಯ

(1) ಕ್ರಿಯಾರ್ಥಕ ವಾಕ್ಯ

(2) ವೈಷಯಿಕ ವಾಕ್ಯ

(3) ಪ್ರಸ್ತಾವನಾ ವಾಕ್ಯ

(4) ನಿಷೇಧಾರ್ಥಕ ವಾಕ್ಯ

60. 'ನೂರಾರು' ಎಂಬ ಪದದಲ್ಲಿ ________ ಸಂಧಿಯಿದೆ.

(1) ಸವರ್ಣದೀರ್ಘ

(2) ಲೋಪ

(3) ಆಗಮ

(4) ಆದೇಶ

61. 'ತೋಟವನ್ನು' ಎಂಬ ಪದದಲ್ಲಿ ________ ಸಂಧಿಯಿದೆ.

(1) ವೃದ್ಧಿಸಂಧಿ

(2) ಗುಣಸಂಧಿ

(3) ಆಗಮ

(4) ಆದೇಶ

62. 'ಹೊಸಗನ್ನಡ' ಎಂಬ ಪದದಲ್ಲಿ ________ ಸಂಧಿಯಿದೆ.

(1) ಲೋಪ

(2) ಯಣ್‌ಸಂಧಿ

(3) ಆಗಮ

(4) ಆದೇಶ

63. 'ನಾನು' ಎನ್ನುವುದು ________ ಸರ್ವನಾಮ.

(1) ಪ್ರಥಮ ಪುರುಷ

(2) ಉತ್ತಮ ಪುರುಷ

(3) ಮಧ್ಯಮ ಪುರುಷ

(4) ಶ್ರೇಷ್ಠ ಪುರುಷ

64. 'ಕುಡಿದಾನು' ಎಂಬುದು ________ ಪದ.

(1) ವಿಧ್ಯರ್ಥಕ

(2) ನಿಷೇಧಾರ್ಥಕ

(3) ಸಂಭಾವನಾರ್ಥಕ

(4) ಪ್ರೇರಣಾರ್ಥಕ

www.shikarat.com

65. 'ಏಳಿಂ' ಎನ್ನುವುದು ________ ಪದ.

(1) ನಿಷೇಧಾರ್ಥಕ

(2) ಸಂಭಾವನಾರ್ಥಕ

(3) ವಿಧ್ಯರ್ಥಕ

(4) ಸಂದೇಹಾರ್ಥಕ

*ಸೂಚನೆಗಳು: ಕೆಳಗಿನ ಪ್ರಶ್ನೆಗಳಲ್ಲಿ (ಪ್ರಶ್ನೆ ಸಂಖ್ಯೆ 66 – 69) ಕನ್ನಡ ಮೂಲದ್ದು ಅಲ್ಲದ (ಅನ್ಯಭಾಷೆಯಿಂದ ಸ್ವೀಕೃತವಾದ) ಶಬ್ದವನ್ನು ಗುರುತಿಸಿ.*

ಉದಾಹರಣೆ :

(1) ದಾರಿ

(2) ಹಾದಿ

(3) ರಸ್ತೆ

(4) ಕಾಡು

ಈ ನಾಲ್ಕು ಪದಗಳಲ್ಲಿ "ರಸ್ತೆ" ಮಾತ್ರ ಅನ್ಯಭಾಷೆಯಿಂದ ಸ್ವೀಕೃತವಾದ ಪದವಾಗಿದೆ ಆದುದರಿಂದ ಇಲ್ಲಿ (3) ನ್ನು ಗುರುತಿಸಬೇಕು.

66. (1) ನೆಲ

(2) ಜಲ

(3) ಹೊಲ

(4) ಬಿಲ

67. (1) ಪೆನ್ನು

(2) ಚಿನ್ನ

(3) ಕೆನ್ನೆ

(4) ಸನ್ನೆ

68. (1) ಕಾಗೆ

(2) ಕಾಲು

(3) ಕಾಗದ

(4) ಕಾಡು

69. (1) ಆಕಾಶ

(2) ಬಾಗಿಲು

(3) ಕುದುರೆ

(4) ಮುಂಜಾನೆ

www.shikarat.com

*ಸೂಚನೆಗಳು:* ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 70 – 72) ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ, ಆಗ (4) ನ್ನು ಗುರುತಿಸಿ.

ಉದಾಹರಣೆ : ಮಕ್ಕಳು ಸಂಗೀತವನ್ನು ಸುಸ್ರಾವ್ಯವಾಗಿ **ಆಡಿದರು**.

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಆಲಿಸಿದರು

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು ಆದುದರಿಂದ (1) ನ್ನು ಗುರುತಿಸಬೇಕು.

70. ರಾಜ್ಯೋತ್ಸವದ ಕಾರ್ಯಕ್ರಮವು **ವಿಜೃಂಭಣೆ**ಯಿಂದ ಜರುಗಿತು.

(1) ವಿಜೃಂಬಣೆ

(2) ವಿಜ್ರುಂಭಣೆ

(3) ವಿಜ್ರಂಭಣೆ

(4) ಸುಧಾರಣೆ ಬೇಕಿಲ್ಲ

71. ಒಟ್ಟಿನಲ್ಲಿ ಗ್ರಂಥ **ಪರಿಷ್ಕರಣೆ** ಮಾಡಲು ನಿರ್ಧರಿಸಿದರು.

(1) ಪರಿಶ್‌ಕರಣೆ

(2) ಪರಿಶರ್ಕರಣೆ

(3) ಪರಿಶ್ಕರಣೆ

(4) ಸುಧಾರಣೆ ಬೇಕಿಲ್ಲ

72. ಈ ದಿನ ಕೇಸನ್ನು **ಇತ್ಯರ್ತ** ಪಡಿಸುತ್ತೇವೆ

(1) ಇತ್ಯರ್ಥ

(2) ಈತ್ಯರ್ಥ

(3) ಇತರ್ತ

(4) ಸುಧಾರಣೆ ಬೇಕಿಲ್ಲ



www.shikarat.com

**ಸೂಚನೆಗಳು:** ಕೆಳಗಿನವುಗಳಲ್ಲಿ (ಪ್ರಶ್ನೆ ಸಂಖ್ಯೆ 73 – 77) ಗೆರೆಹಾಕಿದ ಭಾಗಗಳು ತಪ್ಪಾಗಿವೆ. ಅವುಗಳ ಮುಂದೆ ಕೊಟ್ಟ ನಾಲ್ಕು ಪರ್ಯಾಯ ರೂಪಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ.

ಉದಾಹರಣೆ : ಕುವೆಂಪು **ಚೋಮನದುಡಿ** ಎಂಬ ಕಾದಂಬರಿಯನ್ನು ರಚಿಸಿದ್ದಾರೆ.

(1) ಬೆಟ್ಟದ ಜೀವ

(2) ಕಾನೂರ ಹೆಗ್ಗಡತಿ

(3) ಚಿಕ್ಕವೀರ ರಾಜೇಂದ್ರ

(4) ದುರ್ಗಾಸ್ತಮಾನ

ಇಲ್ಲಿ "ಕಾನೂರ ಹೆಗ್ಗಡತಿ" ಸರಿಯಾದ ಉತ್ತರ ಆದುದರಿಂದ (2) ನ್ನು ಗುರುತಿಸಬೇಕು.

73. ಪ್ರಾಚೀನ ಕಾಲದಲ್ಲಿ ಕನ್ನಡ ನಾಡು ಕಾವೇರಿಯಿಂದ ಹಿಡಿದು **ಗಂಗಾ** ನದಿಯ ತನಕ ಹರಡಿತ್ತು ಎಂದು ಪ್ರಸಿದ್ಧಿಯಾಗಿತ್ತು.

(1) ತುಂಗಭದ್ರ

(2) ಕೃಷ್ಣಾ

(3) ಗೋದಾವರಿ

(4) ನರ್ಮದ

74. ಶಿವರಾಮ ಕಾರಂತರು **ಶ್ರೀರಾಮಾಯಣದರ್ಶನಂ** ಎಂಬ ಕೃತಿಯನ್ನು ರಚಿಸಿದ್ದಾರೆ.

(1) ಮಲೆಗಳಲ್ಲಿ ಮದುಮಗಳು

(2) ಚಿಕ್ಕವೀರ ರಾಜೇಂದ್ರ

(3) ಮರಳಿ ಮಣ್ಣಿಗೆ

(4) ಸಂಸ್ಕಾರ

75. ಕನ್ನಡದ 'ಆದಿಕವಿ' ಎಂಬ ಹೊಗಳಿಕೆಗೆ **ಕುಮಾರವ್ಯಾಸ** ಪಾತ್ರನಾಗಿದ್ದಾನೆ.

(1) ಶ್ರೀವಿಜಯ

(2) ಪಂಪ

(3) ರನ್ನ

(4) ಬಸವಣ್ಣ



www.shikarat.com

76. ಕನ್ನಡದ ಜನಪ್ರಿಯ ಕಥನ ಕಾವ್ಯದ ಪುಣ್ಯಕೋಟಿಯ ಕಥೆಯಲ್ಲಿ ಬರುವ ಹುಲಿಯ ಹೆಸರು <u>ಕರ್ದಮ</u>.

(1) ವ್ಯಾಗುರ

(2) ಬರ್ದಿಲ

(3) ಅರ್ಬುದ

(4) ಮಧ್ಯಮ

77. ಶ್ರೇಷ್ಠ ಸಾಹಿತಿಗಳೆಂದು ಹೆಸರು ಪಡೆದಿರುವ ಕನ್ನಡದ ತಂದೆ–ಮಗನ <u>ಜೋಡಿ ಎಂದರೆ ಮಾಸ್ತಿ</u> – ಶ್ರೀನಿವಾಸ.

(1) ಡಿ.ವಿ. ಗುಂಡಪ್ಪ – ಬಿ.ಜಿ. ಎಲ್. ಸ್ವಾಮಿ

(2) ಹರಿಹರ – ರಾಘವಾಂಕ

(3) ಶಿವರಾಮ ಕಾರಂತ್ – ಉಲ್ಲಾಸ ಕಾರಂತ್

(4) ಲಂಕೇಶ್ – ಇಂದ್ರಜಿತ್ ಲಂಕೇಶ್

***<u>ಸೂಚನೆಗಳು:</u>*** *ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 78 – 85) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿ.*

*ಉದಾಹರಣೆ :*

<u>ವಿದ್ಯಾರ್ಥಿಗಳು</u> <u>ಜಾಸ್ತಿಯಾಗಿದೆ</u>
P Q

<u>ಆಕರ್ಷಿತರಾಗುತ್ತಿರುವುದು</u>
R

<u>ದುರಭ್ಯಾಸಗಳ ಕಡೆಗೆ</u>
S

(1) P S R Q

(2) Q R S P

(3) S Q R P

(4) Q S R P

ಇಲ್ಲಿ P S R Q ಎಂಬುದು ಸರಿಯಾದ ಜೋಡಣೆಯ ಕ್ರಮ ಆದುದರಿಂದ ಇಲ್ಲಿ (1) ನ್ನು ಗುರುತಿಸಬೇಕು.



www.shikarat.com

78. ಅರ್ಥಮಾಡಿಕೊಳ್ಳಬೇಕು
P

ಎಂಬುದನ್ನು ನೀವೇ
Q

ಅಸೂಕ್ಷ್ಮವಾಗಿರುತ್ತೀರೋ ಅಥವಾ
R

ಕ್ರಿಯಾಶೀಲ ಹುಚ್ಚರಾಗಿರುತ್ತೀರೋ
S

(1) P R S Q
(2) R S P Q
(3) P Q R S
(4) R S Q P

79. ಬಲೆ ತನಗೆ ಜೇಡ ನಿರ್ಮಿಸಿಕೊಂಡಿರುವ
P Q

ಮಿಕ್ಕವರಿಗೆ ಮೃತ್ಯುಪಂಜರ
R

ಮಾತ್ರ ವಾಸಸ್ಥಾನ
S

(1) R P Q S
(2) P Q R S
(3) Q P S R
(4) R Q P S

80. ಸುಖವೆಂದರೆ ಏನೆಂಬ
P

ಜನರಿಗಾದರೂ ಸುಖಕ್ಕಾಗಿ
Q

ಕಲ್ಪನೆ ಬಹಳ ಕಡಿಮೆ
R

ಎಲ್ಲರೂ ಹಂಬಲಿಸುವವರೆ
S

(1) Q S P R
(2) P R Q S
(3) Q S R P
(4) P Q R S

81. ಅದಕ್ಕೆ ರಕ್ಷೆ ಶಿಕ್ಷೆ ನಮಗೆ
P Q R

ಗುಲಾಬಿಗಿಡದ ಮುಳ್ಳು
S

(1) S P R Q
(2) R Q P S
(3) P Q R S
(4) S Q R P

www.shikarat.com

82. ವ್ಯಕ್ತವಾಗುತ್ತದೆ (P) ನಮ್ಮ ಸಮಾಜದಲ್ಲಿ (Q)

ಕ್ರೌರ್ಯ ಮತ್ತು ದಬ್ಬಾಳಿಕೆ (R)

ಅನೇಕ ರೀತಿಗಳಲ್ಲಿ (S)

(1) R S P Q

(2) S Q R P

(3) Q R S P

(4) P Q R S

83. ಗ್ರೀಸ್ ದೇಶದ ಅಲೆಗ್ಸಾಂಡರ್ (P)

ಹೊರಟವನು (Q) ಇಡೀವಿಶ್ವವನ್ನು (R)

ಗೆಲ್ಲುವ ಆಸೆಯಿಂದ (S)

(1) R S P Q

(2) P Q R S

(3) Q P R S

(4) P R S Q

84. ಮೃಗವನ್ನು (P) ಆಶ್ಚರ್ಯವಾಗುತ್ತದೆ (Q)

ಮನುಷ್ಯನ ಮನದಾಳದಲ್ಲಿರುವ (R)

ನೋಡಿದರೆ (S)

(1) S R P Q

(2) Q R P S

(3) R P S Q

(4) P Q R S

85. ನಮ್ಮೊಂದಿಗಿರುವುದು ಸಾಧ್ಯವಿಲ್ಲ (P)

ವಿಚಿತ್ರವೆಂದರೆ (Q)

ನಾಟಕಗಳು ನಮ್ಮೊಂದಿಗಿದ್ದರೂ (R)

ನಾಟಕಗಳ ಪ್ರದರ್ಶನ (S)

(1) P Q R S

(2) R S P Q

(3) Q R S P

(4) R S Q P



www.shikarat.com

ಸೂಚನೆಗಳು : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 86 – 91) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೆ (4) ಭಾಗವನ್ನು ಗುರುತಿಸಿ.

ಉದಾಹರಣೆ : ವಿದ್ಯಾರ್ಥಿಗಳು (1) ಶಾಲೆಗೆ (2) ಮುಗಿಸಿಕೊಂಡು ಬಂದರು (3) ತಪ್ಪಿಲ್ಲ (4)

ಇಲ್ಲಿ ಭಾಗ (2) ರಲ್ಲಿ "ಶಾಲೆಯನ್ನು" ಎಂದಿರ ಬೇಕಾಗಿತ್ತು ಈ ಭಾಗದಲ್ಲಿ ದೋಷವಿರುವುದರಿಂದ ಇಲ್ಲಿ (2) ನ್ನು ಗುರುತಿಸಬೇಕು.

86. ಬೆಟ್ಟ (1) ಹತ್ತುವುದು (2) ಬಲುಕಸ್ಟ. (3) ತಪ್ಪಿಲ್ಲ (4)

87. ಹಾಸಿಗೆಯಿದ್ದಷ್ಟು (1) ಕಾಲುಚಾಚುವುದು (2) ಒಳ್ಳೆಯದು. (3) ತಪ್ಪಿಲ್ಲ (4)

88. ವಿದ್ವತ್ಪೂರ್ಣ (1) ಭಾಷಣದಿಂದ ವಿದ್ಯಾರ್ಥಿಗಳು (2) ಸಂತೋಷಗೊಂಡರು. (3) ತಪ್ಪಿಲ್ಲ (4)

89. ರೈತ (1) ಭೂಮಿ (2) ಅಗಿಯಲು ಆರಂಭಿಸಿದ. (3) ತಪ್ಪಿಲ್ಲ (4)

90. ಹೆಂಗಸರು (1) ನದಿಯಿಂದ (2) ನೀರಿಗೆ ತಂದರು. (3) ತಪ್ಪಿಲ್ಲ (4)

91. ಕಾವೇರಿ (1) ಕರ್ನಾಟಕ (2) ಜೀವನದಿ. (3) ತಪ್ಪಿಲ್ಲ (4)

www.shikarat.com

***ಸೂಚನೆಗಳು*** *: ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ* ***92 - 97****) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಇಂಗ್ಲೀಷ್ ರೂಪಕ್ಕೆ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.*

ಉದಾಹರಣೆ : ಹೆದ್ದಾರಿಯಲ್ಲಿ ಕಾರೊಂದು **ಆಕ್ಸಿಡೆಂಟ್** ಗೊಳಗಾಯಿತು.

(1) ಪ್ರಮಾದ

(2) ಅಪಘಾತ

(3) ವಿಪತ್ತು

(4) ಆಕಸ್ಮಾತ್

ಇಲ್ಲಿ "ಅಪಘಾತ" ಎಂಬುದು ಸೂಕ್ತ ರೂಪವಾದುದರಿಂದ (2) ನ್ನು ಗುರುತಿಸಬೇಕು.

**92.** **ಕಮ್ಯುನಿಸಂ** ತಾನು ಹುಟ್ಟಿದ ರಾಷ್ಟ್ರಗಳಲ್ಲಿ ದುರ್ಗತಿ ಕಂಡರೂ, ನಮ್ಮ ಕೇರಳದಲ್ಲಿ ಉಳಿದುಕೊಂಡಿದೆ.

(1) ಸಮತಾವಾದ

(2) ಸಮಾಜವಾದ

(3) ದೇಸಿವಾದ

(4) ನಕ್ಸಲ್‌ವಾದ

**93.** ದಾರಿಯಲ್ಲಿ ಬಿದ್ದಿದ್ದ ಹಣವ ಎತ್ತಿಕೊಳ್ಳಲು ನನಗೆ **ಹೆಸಿಟೇಟ್** ಆಯಿ

(1) ಹಿಂಜರಿಕೆ

(2) ಸಂಕೋಚ

(3) ಕಸಿವಿಸಿ

(4) ಮುಜುಗರ

**94.** ಮಹಿಳಾ ದಿನಾಚರಣೆಗೆ ಬಂ ಅತಿಥಿಗಳು ತುಂಬ **ರೆಲವೆಂಟಾ** ಮಾತನಾಡಿದರು.

(1) ಚೆನ್ನಾಗಿ

(2) ನಿರರ್ಗಳವಾಗಿ

(3) ಸ್ಪಷ್ಟವಾಗಿ

(4) ಸುಸಂಗತವಾಗಿ

**95.** ಅವನು ಆ ಸಿನಿಮಾವನ್ನು **ಕ್ರಿಟಿಸೈಸ್** ಮಾಡಿದನು.

(1) ವಿವರಿಸು

(2) ವಿಮರ್ಶಿಸು

(3) ವಿಶ್ಲೇಷಿಸು

(4) ತೆಗಳು

www.shikarat.com

96. ಭ್ರಷ್ಟಾಚಾರದಿಂದಾಗುವ ಪರಿಣಾಮಗಳನ್ನು **ಇಮ್ಯಾಜಿನ್** ಮಾಡಿಕೊಳ್ಳಲು ಸಾಧ್ಯವಿಲ್ಲ.

(1) ದುರಂತ

(2) ಊಹಿಸು

(3) ನಷ್ಟ

(4) ನಾಶ

97. ತನಗೆ **ಇಂಡಿಪೆಂಡೆನ್ಸ್** ಸಾಲದೆಂದು ಮಾಧುರಿ ಗಂಡನನ್ನು ಬಿಟ್ಟಳಂತೆ.

(1) ಸ್ವೇಚ್ಛೆ

(2) ಸ್ವಾಯತ್ತತೆ

(3) ಸ್ವಾತಂತ್ರ್ಯ

(4) ಸ್ವಚ್ಛಂದ

***ಸೂಚನೆಗಳು** : ಈ ಕೆಳಗೆ (ಪ್ರಶ್ನೆ ಸಂಖ್ಯೆ 98 – 100) P Q R S ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.*

ಉದಾಹರಣೆ :

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡ ನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) Q S R P

(2) S R Q P

(3) P Q R S

(4) R P Q S

ಇಲ್ಲಿ ಸರಿಯಾದ ಉತ್ತರ Q S R P ಆದುದರಿಂದ (1) ನ್ನು ಗುರುತಿಸಬೇಕು.

www.shikarat.com

98. P. ಈ ಆತ್ಮಕಥನವು ನನಗೆ ಇಷ್ಟವಾಗಲು ಹಲವಾರು ಕಾರಣಗಳಿವೆ.

Q. ಮೂರ್ತಿಯವರ 'ಬಾಳಹಾದಿ' ಆತ್ಮಕಥನವು 'ವ್ಯಕ್ತಿಮಹತ್ವ' ದ ಭೂಮಿಕೆಯಿಂದ ಸಿದ್ಧವಾಗಿದೆ.

R. ಅವುಗಳಲ್ಲಿ ಮುಖ್ಯವಾದುದು, ಬೆಂಗಳೂರಿನ ಸಾಂಸ್ಕೃತಿಕ ಬದುಕು ಕಳೆದ ಅರ್ಧಶತಮಾನದಲ್ಲಿ ಹೇಗೆ ವಿರೂಪಗೊಂಡಿದೆಯೆಂಬುದನ್ನು ಇದು ದಾಖಲಿಸುತ್ತದೆ.

S. ನಮ್ಮಲ್ಲಿ ಆತ್ಮಕಥನಗಳ ಸಂಖ್ಯೆ ಗಣನೀಯವಾಗೇ ಇದೆ.

(1) P Q R S (2) S Q P R
(3) S P Q R (4) R S Q P

99. P. ಅವಳು ಕೈಕೇಯಿಯ ಕಿವಿಗಳಲ್ಲಿ ವಿಷ ತುಂಬಿದಳು.

Q. ರಾಮನಿಗೆ ಪಟ್ಟಾಭಿಷೇಕವಾಗುತ್ತಿದೆ ಎನ್ನುವ ಸುದ್ದಿ ಅಯೋಧ್ಯೆಯಲ್ಲೆಲ್ಲಾ ಹರಡಿತು.

R. ಅವಳ ದಾಸಿ ಮಂಥರೆಗೆ ಈ ಸುದ್ದಿ ಸ್ವಲ್ಪವೂ ಸಂತೋಷ ತರಲಿಲ್ಲ.

S. ರಾಣಿ ಕೈಕೇಯಿಗಂತೂ ಮಹದಾನಂದವಾಯಿತು.

(1) S R P Q (2) P Q R S
(3) Q S R P (4) Q R P S

100. P. ಯಾವುದೇ ಮಗು ವಿಶೇಷವಾದ ದೈಹಿಕ ಊನವಿಲ್ಲದಿದ್ದ ಪಕ್ಷದಲ್ಲಿ ತಾನು ಹುಟ್ಟಿದ ಒಂದೂವರೆ ಎರಡು ವರ್ಷದ ಒಳಗಾಗಿ ಒಂದಲ್ಲೊಂದು ಭಾಷೆಯನ್ನು ಕಲಿಯುತ್ತದೆ.

Q. ಇದನ್ನು ನಡೆಯುವುದು ಅಥವಾ ಕೈಕಾಲು ಆಡಿಸುವುದು ಮುಂತಾದ ಕ್ರಿಯೆಗಳಷ್ಟೇ ಸಹಜವಾಗಿ ಮಗು ಕಲಿಯುತ್ತದೆ.

R. ಭಾಷೆಯನ್ನು ಕಲಿಯುವ ವಿಷಯದಲ್ಲಿ ಒಂದು ಸಂಗತಿ ನಮಗೆ ಚಿರಪರಿಚಿತ.

S. ಅದು ತಂದೆ–ತಾಯಿಯರ ಭಾಷೆ ಇರಬಹುದು ಅಥವಾ ಪರಿಸರದ ಭಾಷೆಯಾಗಿರಬಹುದು.

(1) R P S Q
(2) P Q R S
(3) P Q S R
(4) R P Q S



www.shikarat.com